ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು):

1. ಹೌದು, ಒಂದೇ ಒಂದು ಮನವಿ ಬಂದಿದೆ.

2. ಪಿಸ್ತಪಿಪ್ಯಾನಿಲಯದ ಹೆಸರನ್ನು ಬದಲಾಯಿಸುವ ಉದ್ದೇಶವು ಸರ್ಕಾರಕ್ಕೆ ಇಲ್ಲ.

ರಾಜ್ಯದಲ್ಲಿ ಪ್ರೌಢಶಾಲೆಗಳ ಸಂಖ್ಯೆಯ ಬಗ್ಗೆ

(297) ಶ್ರೀ ಉಮೇಶ ಕತ್ತಿ (ಹುಕ್ಕೇರಿ): ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1989-1990, 1990-91ನೇ ಸಾಲಿಗೆ ಎಷ್ಟು ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಸರ್ಕಾರ ಮಂಜೂರಾತಿ ನೀಡುವುದು;

ಆ) ಸರ್ಕಾರಿ ವಲಯಗಳಿಂದ ಎಷ್ಟು ಪ್ರೌಢಶಾಲೆಗಳನ್ನು ಪ್ರಾರಂಭಿಸಲಾಯಿತು(ಜಿಲ್ಲಾವಾರು ಮಾಹಿತಿ ಒದಗಿಸುವುದು)?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು):

ಅ) 1989-90ನೇ ಸಾಲನಲ್ಲಿ-37

1990-91ನೇ ಸಾಲನಲ್ಲಿ-37

ಆ) 1989-90ನೇ ಸಾಲನಲ್ಲಿ-2

1990-91ನೇ ಸಾಲಿನಲ್ಲಿ-12

(ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ)

ವೈದ್ಯಕೀಯ ಸ್ಥಾನಗಳನ್ನು ಕಾಯ್ದಿರಿಸುವ ಬಗ್ಗೆ

(298) - ಶ್ರೀ ಉಮೇಶ್ ಕತ್ತಿ (ಹುಕ್ಕೇರಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗಡಿಭಾಗದ ಜನರಿಗೋಸ್ಕರ ಐದು ವೈದ್ಯಕೀಯ ಸ್ಥಾನಗಳನ್ನು ಕಾಯ್ದಿರಿಸುವ ಪದ್ಧತಿ ಸರ್ಕಾರದಲ್ಲಿರುವುದೇ?

ಆ) ಹಾಗಿದ್ದಲ್ಲಿ 1989-1990ನೇ ಸಾಲಿಗೆ ಯಾವ ಅಭ್ಯರ್ಥಿಗಳಿಗೆ ಈ ಸ್ಥಾನಗಳನ್ನು ನೀಡಲಾಗಿದೆ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಈಗ ಇಲ್ಲ

ಆ) 1989-90ನೇ ಸಾಲಿನಲ್ಲಿ ಸದರಿ ಸ್ಥಾನಗಳನ್ನು ಈ ಕೆಳಕಂಡ ಅಭ್ಯರ್ಥಿಗಳಿಗೆ ನೀಡಲಾಗಿದೆ:

1) ವಿದ್ಯಾಸರಸ್ವತಿ

2) ರಚವಾ. ಎಸ್.

3) ಅಪರ್ಣ. ಎಸ್. ಬಿ.

4) ಶ್ರೀಶೈಲಾ ಜಿ. ಜಮಖಂಡಿ

5) ಗಣಪತಿಭಟ್